ತಾಲ್ಲೂಕು	ಹಿಪ್ಪುನೇರಳೆ ವಿಸ್ತೀರ್ಣ ಎಕರೆಗಳಲ್ಲಿ
ಬೆಳಗಾಂ	218.20
ಬೈಲಹೊಂಗಲ	221.25
ಖಾನಾಪುರ	117. 20
ಹುಕ್ಕೇರಿ	416. 25
ಸವದತ್ತಿ	188.20
ರಾಮದುರ್ಗ	114. 20
ಗೋಕಾಕ್	674.35
ಅಥಣಿ	405.00
ರಾಯಭಾಗ್	100.20
ಚಿಕ್ಕೋಡಿ	712.15
ಒಟ್ಟು	**3170.00**

ಬಸವಕಲ್ಯಾಣದಲ್ಲಿ ಸೂರ್ಯಕಾಂತಿ ಬೆಳೆ ನಾಶ

646 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಅದರಲ್ಲೂ ಬಸವಕಲ್ಯಾಣ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪದಿಂದ ಹಾಗೂ ರೋಗದಿಂದ ಸೂರ್ಯಕಾಂತಿ ಬೆಳೆಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯಲ್ಲಿ ಆ ಬೆಳೆಯಿಂದ ರೈತರಿಗೆ ಉಂಟಾಗಿರುವ ನಷ್ಟವೆಷ್ಟು?

ಇ) ಸರ್ಕಾರವು ತೊಗರಿ ಬೆಳೆ ಹಾನಿಗೆ ಪರಿಹಾರ ನೀಡಿದ ರೀತಿಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಸೂರ್ಯಕಾಂತಿ ಬೆಳೆ ನಾಶದಿಂದ ಹಾನಿಗೊಳಗಾದವರಿಗೆ ಪರಿಹಾರ ನೀಡುತ್ತದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು):

ಅ) ಹೌದು. ಬಸವಕಲ್ಯಾಣದ ಕೊಹಿನೂರು ಕಂದಾಯ ವೃತ್ತದಲ್ಲಿ ರೋಗದ ಕಾರಣದಿಂದ ಆದ ವರದಿಯಾಗಿದೆ.

ಆ) ಒಟ್ಟು 1,060 ಹೆಕ್ಟೇರ್ ಪ್ರದೇಶದಲ್ಲಿದ್ದ ಸೂರ್ಯಕಾಂತಿ ಬೆಳೆಯು ಹಾನಿಗೊಳಗಾಗಿರುತ್ತದೆ.

ಇ) ಪರಿಹಾರ ನಿಮಯಾವಳಿಗಳ ಪ್ರಕಾರ ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಬೆಳೆಗೆ ಮಾತ್ರ ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ: 167 ಟಿಎನ್‌ಆರ್ 88 ದಿನಾಂಕ 4.12.92 ಮತ್ತು 19.10.93 ತಿದ್ದುಪಡಿ ಆದಂತೆ, ಪರಿಹಾರ ನೀಡುವ ಅವಕಾಶವಿದೆ.

ಬಸವಕಲ್ಯಾಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ವಸತಿ ಗೃಹಗಳ ಬಗ್ಗೆ

645 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಸಮಾಜಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ವಸತಿ ಗೃಹಗಳೆಷ್ಟು?

ಆ) ಅವುಗಳ ಪೈಕಿ ಎಷ್ಟು ವಸತಿಗೃಹಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ?

ಇ) ಬಸವಕಲ್ಯಾಣದಲ್ಲಿ ವಸತಿಗೃಹಗಳು ಖಾಸಗೀಕಟ್ಟಡಗಳಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೊಸ ಕಟ್ಟಡ ಕಟ್ಟಲು ಜಾಗವಿರುವುದರಿಂದ 1994-95ರಲ್ಲಿ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಹಾಗು ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಈ ಕೆಳಕಂಡ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

1.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	- 2
2.	ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯ	- 1
	ಒಟ್ಟು	3

ಆ) ಒಂದು ಮೆಟ್ರಿಕ್‌ನಂತರದ (ಬಾಲಕರ) ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇ) ಹೌದು

ಈ) ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ಎರಡು ವಿದ್ಯಾರ್ಥಿನಿಲಯಗಳ ಪೈಕಿ ಒಂದು ವಿದ್ಯಾರ್ಥಿ ನಿಲಯಕ್ಕೆ ನಿವೇಶನವನ್ನು ಪಡೆಯಲಾಗಿದೆ. ಮತ್ತೊಂದು ನಿವೇಶನವನ್ನು ಪಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಣದ ಲಭ್ಯತೆಯನ್ನು ಆಧರಿಸಿ 94-95ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಸವಕಲ್ಯಾಣದಲ್ಲಿ ಕೈಗಾರಿಕಾ ಶೆಡ್‌ಗಳ ಸ್ಥಾಪನೆ

648 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಎಕರೆ ಜಮೀನನ್ನು ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಸಲುವಾಗಿ ರೈತರಿಂದ ಸ್ವಾಧೀನಪಡಿಸಿಕೊಂಡಿದ್ದಾರೆ?

ಆ) ಇಲ್ಲಿಯವರೆಗೆ ರೈತರಿಗೆ ಕೊಟ್ಟಿರುವ ಪರಿಹಾರ ಧನವೆಷ್ಟು?

ಇ) ಇಲ್ಲಿಯವರೆಗೆ ಯಾವುದೇ ಕೆಲಸಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು?

ಈ) ಯಾವಾಗ ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ಮಂಡಳಿಯು ಬಸವಕಲ್ಯಾಣದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ 91 ಎಕರೆ 9 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಆದರ ಜೊತೆಗೆ 5 ಎಕರೆ 36 ಗುಂಟೆ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಳಿಯು ತೀರ್ಮಾನ ಕೈಗೊಂಡಿದ್ದು ಭೂ ಸ್ವಾಧೀನ ಕ್ರಮಗಳನ್ನು ಜಾರಿಯಲ್ಲಿವೆ.

ಆ) ಸದರಿ ಜಮೀನಿಗೆ ಒಪ್ಪಂದದ ಪ್ರಕಾರ ಎಕರೆ ಒಂದಕ್ಕೆ ರೂ. 55,000-00 ದಂತೆ ಒಟ್ಟು ರೂ. 50,17,375-00ಗಳನ್ನು ಭೂ ಮಾಲೀಕರಿಗೆ ವಿತರಣೆ ಮಾಡಲು ಗುಲ್ಬರ್ಗಾ ವಿಶೇಷ ಭೂಸ್ವಾಧೀನ ಅಧಿಕಾರಿಯವರಿಗೆ ದಿನಾಂಕ : 20-3-91ರಂದು ಬಿಡುಗಡೆ ಮಾಡಲಾಗಿ ಸದರಿ ಹಣವನ್ನು ಭೂ ಮಾಲೀಕರಿಗೆ ಹಂಚಲಾಗಿದೆ.